ಭೇಟಿ ನೀಡಿ ಉಗ್ರಾಣದಲ್ಲಿಯ ಆಹಾರ ಸಾಮಗ್ರಿಗಳು ಕಳಪೆ ಮಟ್ಟದ್ದಾಗಿದೆಯೆಂದು ಆಕ್ಷೇಪಿಸಿ ಗುತ್ತಿಗೆದಾರರಾದ " ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೀದರ್" ಇವರ ಗುತ್ತಿಗೆಯನ್ನು ರದ್ದು ಪಡಿಸಿರುತ್ತಾರೆ ಹಾಗೂ ಹೆಸರುಕಾಳು ಆಯೋಡೈಜ್ಡ್ ಇಲ್ಲದ ಉಪ್ಪು ಮತ್ತು ಇನ್ನುಳಿದ ಕಡಲೇಬೇಳೆ, ಕೆಂಪು ಮೆಣಸಿನಕಾಯಿ ಮತ್ತು ಬೆಲ್ಲ ಈ ಆಹಾರ ಸಾಮಗ್ರಿಗಳು ಕಳಪೆ ಮಟ್ಟದ್ದಾಗಿರುವುದರಿಂದ ಪ್ರಭಾರಿ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಹಾಗೂ ಕರಣಿಕರರು ಇವರನ್ನು ಅಮಾನತ್ತು ಗೊಳಿಸಿ ಕ್ರಮ ಕೈಗೊಂಡಿರುತ್ತಾರೆ.

ಇ) ಔರಾದ ತಾಲ್ಲೂಕಿನಲ್ಲಿ ಆಹಾರ ಧಾನ್ಯ ಸರಬರಾಜು ಮಾಡುವ ಗುತ್ತಿಗೆದಾರರು ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ಔರಾದ್ ಅವರು ಆಗಿರುತ್ತಾರೆ ಸರಬರಾಜು ಆಗಿರುವ ಆಹಾರ ಪದಾರ್ಥಗಳು ಒಳ್ಳೆಯ ಗುಣಮಟ್ಟದ್ದಾಗಿರುವುದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಬೀದರ್ ಜಿಲ್ಲೆಯ "ಮಾಂಜರಾ" ನದಿಗೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಬಗ್ಗೆ

4222 (4861) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ "ಮಂಜರಾ" ನದಿಯ ನೀರು ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತಲಿದ್ದು, "ಗೋದಾವರಿ ಬೇಸಿನ್" ನಲ್ಲಿ ಬರುವ ಬಚಾವತ್ ಅವಾರ್ಡ್ ಪ್ರಕಾರ 7 ಟಿ.ಎಂ.ಸಿ. ನೀರು ಕರ್ನಾಟಕ ರಾಜ್ಯ ಉಪಯೋಗಿಸಬೇಕಗಿದ್ದು. ಈಗ ಹಾಲಿ ಎಷ್ಟು ಟಿ.ಎಂ.ಸಿ. ನೀರು ಉಪಯೋಗಿಸಲಾಗುತ್ತಿದೆ: ವಿವರ ಒದಗಿಸುವುದು:

ಆ) ಹರಿದು ಹೋಗುವ ನೀರು ಕರ್ನಾಟಕ ರಾಜ್ಯ ಉಪಯೋಗಿಸಲು ಮೇಲೆ ತಿಳಿಸಿರುವ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಮ್ – ಬ್ಯಾರೇಜ್ ಕಟ್ಟುವ ಯೋಜನೆ ಏನಾದರೂ ಇದೆಯೆ?

ಶ್ರಿ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಗೋದಾವರಿ ಜಲಾವಿವಾದ ನ್ಯಾಯಾಧೀಕರಣ ತೀರ್ಪಿನನ್ವಯ ಗೋದಾವರಿ ಕಣಿವೆಯಲ್ಲಿ ರಾಜ್ಯವು 22.37 ಟಿ.ಎಂ.ಸಿ. ಪ್ರಮಾಣದ ನೀರನ್ನು ಬಳಿಸಕೊಳ್ಳಬಹುದಾಗಿದೆ. ಈ ನೀರನ್ನು ಕೆಳಕಂಡ ಯೋಜನೆಗಳ ಮೂಲಕ ಬಳಸಲು ಉದ್ದೇಶಿಸಲಾಗಿದೆ.

ಕ್ರಮ ಸಂ.	ಯೋಜನೆಗಳು	ನೀರಿನ ಹಂಚಿಕೆ ಟಿ.ಎಂ.ಸಿ.
1.	ಕಾರಂಜಾ ಪ್ರಾಜೆಕ್ಟ್	13.10
2.	ಚುಲ್ಕಿನಾಲ ಪ್ರಾಜೆಕ್ಟ್	1.17
3.	ಮಾಂಜಿರಾ ಏತ ನೀರಾವರಿ ಯೋಜನೆ	1.00
4.	ಕರ್ನಾಟಕ ಭಾಗದ ನಿಜಾಮ್ ಸಾಗರ ಕೆಳಗಿನ ಭಾಗದ ಡ್ರೈನ್ ನೀರು	2.50
5.	ಈಗಿರುವ ಸಣ್ಣ ನೀರಾವರಿ ಯೋಜನೆಗಳು	4.60
	ಒಟ್ಟು	22.37

ಮಾಸ್ಟರ್ ಪ್ಲಾನ್ ಸಮಿತಿಯು ಈ ಮೇಲಿನಂತೆ ಹಂಚಿಕೆಯನ್ನು ಮನ: 1999 ರಲ್ಲಿ ಪರಿಶೀಲಿಸಿ ಈ ಕೆಳಗಿನಂಗತೆ ಪರಿಷ್ಕರಿಸಿರುತ್ತದೆ.

ಕ್ರಮ ಸಂ.	ಯೋಜನೆಗಳು ಹಂಚಿಕೆ	ಪರಿಷ್ಕರಿಸಿದ
1.	ಕಾರಂಜಾ ಪ್ರಾಜೆಕ್ಟ್	9.27
2.	ಚುಲ್ಕಿನಾಲಾ ಪ್ರಾಜೆಕ್ಟ್	1.17
3.	ಮಾಂಜಿರಾ ಹನಿ ನೀರಾವರಿ ಯೋಜನೆ	
4.	ಕರ್ನಾಟಕ ಭಾಗದ ನಿಜಾಮ್ ಸಾಗರ ಕೆಳಗಿನ ಭಾಗದ ಡ್ರೈನ್ ನೀರು	0.67
5.	ಈಗಿರುವ ಸಣ್ಣ ನೀರಾವರಿ ಯೋಜನೆಗಳು	2.95
	ಒಟ್ಟು	18.86

ಆ) ಮಾಂಜಿರಾ ನದಿಗೆ ಅಡ್ಡಲಾಗಿ ಈ ಕೆಳಗೆ ವಿವರಿಸಿರುವ 4 ಬ್ರಿಡ್ಜ್ –ಕಮ್ ಬ್ಯಾರೇಜ್‌ಗಳನ್ನು 21.76 ಕೋಟಿ ರೂ.ಗಳ ಅಂದಾಜಿನಲ್ಲಿ ನಿರ್ಮಿಸಲು ಯೋಜನೆಯನ್ನು ತಯಾರಿಸಲಾಗಿದೆ. ಈ ಬ್ಯಾರೇಜುಗಳನ್ನು ಕೂಡಲೇ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮೂಲಕ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

1) ಜಿರಗಿಹಾಳ್
2) ಮಣಿಕೇಶ್ವರ್
3) ಹಾಲಹಳ್ಳಿ
4) ಚಂದಾಪುರ

ಬೀದರ್ ಜಿಲ್ಲೆಯ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಸಿಬ್ಬಂದಿ ನೇಮಕಾತಿಯ ಬಗ್ಗೆ

4223 (4869) : ಶ್ರೀ ಗುಂಡಪ್ಪ ವಕೀಲ್ (ಜಿರಾದ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಇದೇ ಜನವರಿ ತಿಂಗಳಲ್ಲಿ ಹೊಸದಾಗಿ ಪ್ರಾರಂಭವಾಗಿದ್ದು, ಈ ಪ್ರಸಕ್ತ ವರ್ಷದಲ್ಲಿ ಗಳಿಸಿರುವ ನಿವ್ವಳ ಲಾಭವೆಷ್ಟು;

ಆ) ಸದರಿ ಕಾರ್ಖಾನೆಯಲ್ಲಿ ಈ ವರ್ಷದಲ್ಲಿ ಹಂಗಾಮಿ ಕೆಲಸ ಮಾಡಿರುವ ಸಿಬ್ಬಂದಿ ಸಂಖ್ಯೆ ಎಷ್ಟು;

ಇ) ಸದರಿ ಕಾರ್ಖಾನೆಗೆ ಸರ್ಕಾರ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದೆಯೇ; ಹಾಗಾದರೆ ನೇಮಕಗೊಂಡ ಸಿಬ್ಬಂದಿಗಳ ವಿವರಗಳೇನು; ವಿವರ ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯು 2002 ರ ನವೆಂಬರ್ ತಿಂಗಳಲ್ಲಿ ಕಬ್ಬು ನುರಿಸುವಿಕೆ ಪ್ರಾರಂಭಿಸಿ ಪ್ರಸಕ್ತ ವರ್ಷ 2002–03 ರ ತಾತ್ಕಾಲಿಕ ತಃಖ್ತೆ ಪ್ರಕಾರ ರೂ. 253.22 ಲಕ್ಷಗಳ ನಿವ್ವಳ ಲಾಭಗಳಿಸಿದೆ. ಈ ಲಾಭವು ಸವಕಳಿ ತೆಗೆಯದೆ ಇದೆ. ಸವಕಳಿ ತೆಗೆದರೆ ರೂ. 11.53 ಲಕ್ಷಗಳಷ್ಟು ನಷ್ಟವಾಗಲಿದೆ.